# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1619\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11/01/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ವಿ.ಎಂ.ನಾಡಿಗೇರ್, ಸವಿಕೃಪ, ವಿಜಯನಗರ, 2ನೇ ಕ್ರಾಸ್, ಸಾಗರ ಅಂಚೆ, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಶಿವಮೊಗ್ಗ ಜಿಲ್ಲೆ ಸಾಗರ ಅಂಚೆ 2ನೇ ಕ್ರಾಸ್ ವಿಜಯನಗರ ಸವಿಕೃಪ ನಿವಾಸಿಯಾದ ಶ್ರೀ.ವಿ.ಎಂ.ನಾಡಿಗೇರ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರ್ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ತಾಲ್ಲೂಕು, ಕಸಬಾ ಹೋಬಳಿ, ಗೋಪಾಳ ಗ್ರಾಮದ ಸರ್ವೆ ನಂ.19/3ಎ/31ರ ಜಮೀನಿನ ಜಾಗ ಪಕ್ಕಾ ಪೋಡಿಯಾಗಿ ದೂರುದಾರರ ಅನುಭವದಲ್ಲಿದ್ದು, ವೈಯಕ್ತಿಕ ಆರ್‌ಟಿಸಿ ಮಾಡುವಾಗ 'ಕಬ್ಜೆದಾರರು' ಮತ್ತು 'ವ್ಯವಸಾಯಗಾರರ' ಕಾಲಂನಲ್ಲಿ ಸರ್ಕಾರ ಎಂದು ನಮೂದಾಗಿದ್ದು, ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ತನ್ನ ಹೆಸರನ್ನು ಸೇರ್ಪಡೆ ಮಾಡುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ, ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಗೋಪಾಳ ಗ್ರಾಮದ ಸರ್ವೆ ನಂ.19/3ಎ/31ರ ಜಮೀನಿನ ಕೊನೆ ವರ್ಷದ 2000–01ರ ಕೈಬರಹ ಪಹಣಿಯಲ್ಲಿ ಯಾವುದೇ ಖಾತೆದಾರರ ಹೆಸರಿಗೆ ಖಾತೆಯಿಲ್ಲ. ಈ ಬಗ್ಗೆ ನಂತರದಲ್ಲಿ ಭೂಮಿ ತಂತ್ರಾಂಶದಲ್ಲಿ ಡಾಟಾ ತಿದ್ದುಪಡಿ ಮಾಡುವ ಸಂಬಂಧ ವಿವಿದ ಗ್ರಾಮಗಳ ಸರ್ವೆ ನಂಬರುಗಳ ಪಹಣಿ ಕಾಲಂ 9ರಲ್ಲಿ ಖಾತೆದಾರರ ಹೆಸರಿಲ್ಲದಿರುವುದನ್ನು ಸರಿಪಡಿಸಿ ನೀಡಲು ಭೂಮಿ ಉಸ್ತುವಾರಿ ಕೋಶದಿಂದ ನಿರ್ದೇಶನವಿದ್ದು, ಅಂಥಹ ಸರ್ವೆ ನಂಬರುಗಳ ಪಟ್ಟಿಯನ್ನು ನೀಡಿದೆ. ಆ ಸಮಯದಲ್ಲಿ ಸದರಿ ಸರ್ವೆ ನಂ.19/3ಎ/31ರ ಪಹಣಿ ಕಾಲಂ 9ರಲ್ಲಿ ಯಾವುದೇ ಖಾತೆದಾರರ ಹೆಸರು ನಮೂದಿರದ ಕಾರಣ ಹಾಗೂ ಡಾಟಾ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಸರ್ವೆ ನಂಬರಿನಲ್ಲಿ ಯಾರ ಹೆಸರು ಇಲ್ಲದೇ, ವಿಸ್ತೀರ್ಣ ಮಾತ್ರವಿದ್ದು, 0–01–12 ಗುಂಟೆ ವಿಸ್ತೀರ್ಣವನ್ನು 'ಸರ್ಕಾರದ ವ್ಯತ್ಯಾಸದ ವಿಸ್ತೀರ್ಣ' ಎಂದು ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಆದೇಶ ಪಡೆದು ಅದರಂತೆ ಎಂಆರ್‌ಹೆಚ್ 22/12–13ರ ಆದೇಶದಂತೆ ಸರ್ವೆ ನಂ.19/3ಎ/31ರಲ್ಲಿ 'ಸರ್ಕಾರದ ವ್ಯತ್ಯಾಸದ ವಿಸ್ತೀರ್ಣ' ಎಂದು 0–01–12 ಗುಂಟೆ ವಿಸ್ತೀರ್ಣ ದಾಖಲಾಗಿದೆ. ಸದರಿ ಎಂಆರ್‌ಹೆಚ್ 22/12–13ರ ಮ್ಯುಟೇಷನ್ ರದ್ದುಪಡಿಸಿ, ನಂತರ ಅರ್ಜಿದಾರರಿಗೆ ಖಾತೆ ದಾಖಲಾಗ ಬೇಕಾಗಿದೆ. ಮ್ಯುಟೇಷನ್ ರದ್ದುಪಡಿಸುವ ಅಧಿಕಾರ ತಮಗೆ (ತಹಶೀಲ್ದಾರ್) ಇಲ್ಲದಿರುವ ಕಾರಣ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ತಿಳಿಸಿ, ದೂರುದಾರರಿಗೆ ದಿ:31/04/16 ಮತ್ತು 20/06/17ರಂದು ಹಿಂಬರಹ ನೀಡಿದೆ. ದೂರುದಾರರು ಸಕ್ಷಮ ಪ್ರಾಧಿಕಾರವಾದ ಉಪವಿಭಾಗಾಧಿಕಾರಿಗಳಲ್ಲಿ ಮೇಲ್ಮನವಿ ಸಲ್ಲಿಸಿ, ಮ್ಯುಟೇಷನ್ ವಜಾ ಮಾಡಿಕೊಂಡಲ್ಲಿ ದೂರುದಾರರು ಕ್ರಯಕ್ಕೆ ಪಡೆದಿರುವಂತೆ ಅವರ ಹೆಸರು ಮತ್ತು ಸ್ವತ್ತಿನ ವಿಸ್ತೀರ್ಣವನ್ನು ಪಹಣಿಯಲ್ಲಿ ಸೇರಿಸಲು ಕಾನೂನು ರೀತಿಯ ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ದೂರುದಾರರ ಹೆಸರಿಗೆ ಶಿವಮೊಗ್ಗ ತಾಲ್ಲೂಕ್ ಕಸಬಾ ಹೋಬಳಿ ಗೋಪಾಳ ಗ್ರಾಮದ ಸರ್ವೆ ನಂ.19/3ಎ/31ರ ಜಮೀನಿನ 0.01.12 ಗುಂಟೆ ಜಮೀನು ಇರುವುದು ಸದರಿಯವರು ದೂರಿನೊಂದಿಗೆ ಹಾಜರುಪಡಿಸಿದ 2015–16ನೇ ಸಾಲಿನ ಪಹಣಿಯ ಕಾಲಂ 12ರಲ್ಲಿ ಕಂಡು ಬಂದಿದೆ. ಆದರೆ, 2016–17ನೇ ಸಾಲಿನ ಪಹಣಿಯ ಕಾಲಂ 9 ಮತ್ತು 12ರಲ್ಲಿ ಸದರಿ ವಿಸ್ತೀರ್ಣದ ಜಮೀನು 'ಸರ್ಕಾರ (ವ್ಯತ್ಯಾಸದ ವಿಸ್ತೀರ್ಣ)' ಎಂದು ದಾಖಲಾಗಿದೆ. ಸದರಿ ತಪ್ಪಾದ ನಮೂದನ್ನು ಸರಿಪಡಿಸಿಕೊಡುವಂತೆ ದೂರುದಾರರು ಎದುರುದಾರರಿಗೆ ಅರ್ಜಿಯನ್ನು ನೀಡಿದ್ದು, ಎಂಆರ್ ನಂ.22/12–13ರ ಆದೇಶದಂತೆ ಆರ್‌ಟಿಸಿ ಯಲ್ಲಿ ಸರ್ಕಾರ ಎಂಬುದಾಗಿ ದಾಖಲಾಗಿದ್ದು, ಸದರಿ ಮ್ಯುಟೇಷನ್ ಅಂಗೀಕೃತವಾದ ಕಾರಣ, ಈ ಹಂತದಲ್ಲಿ ಕ್ರಮ ಕೈಗೊಳ್ಳಲು ರಹ ಇಲ್ಲವೆಂದು

ಎದುರುದಾರರು ದಿ:13/04/16ರಂದು ನೀಡಿರುವ ಹಿಂಬರಹವನ್ನು ದೂರುದಾರರು ಹಾಜರುಪಡಿಸಿರುತ್ತಾರೆ. ದೂರುದಾರರು ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಉಪ ವಿಭಾಗ ರವರ ಕಛೇರಿಗೆ ಸಲ್ಲಿಸಿದ ಅರ್ಜಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳು ತಹಶೀಲ್ದಾರ್‌ರಿಗೆ ದಿ:17/01/17ರ ಪತ್ರದಲ್ಲಿ ಹೇಳಿದ್ದು, ಈವರೆವಿಗೂ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡು ಬಂದಿದೆ. ಎಂಆರ್‌ಹೆಚ್ ನಂ.22/12-13 ದಿ:03/04/13ರ ಆದೇಶದಂತೆ ದೂರುದಾರರ ಸ್ವತ್ತು 'ಸರ್ಕಾರದ ವ್ಯತ್ಯಾಸದ ವಿಸ್ತೀರ್ಣ' ಎಂದು ಪಹಣಿಯಲ್ಲಿ ತಪ್ಪಾಗಿ ದಾಖಲಾಗಿದೆ. ಸದರಿ ಸ್ವತ್ತು ದೂರುದಾರರಿಗೆ ಸೇರಿದೆ ಎಂಬ ಬಗ್ಗೆ ಯಾವುದೇ ವಿವಾದವಿಲ್ಲ. ಭೂಮಿ ತಂತ್ರಾಂಶದಲ್ಲಿ ಡಾಟಾ ತಿದ್ದುಪಡಿ ಮಾಡುವ ಸಮಯದಲ್ಲಿ ಸರ್ವೆ ನಂ.19/3ಎ/31ರಲ್ಲಿ ಯಾರ ಹೆಸರು ಇಲ್ಲದೇ ವಿಸ್ತೀರ್ಣ ಮಾತ್ರ ಇದ್ದ ಕಾರಣ ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಆದೇಶದಂತೆ, 'ಸರ್ಕಾರದ ವ್ಯತ್ಯಾಸದ ವಿಸ್ತೀರ್ಣ' ಎಂದು ಪಹಣಿಯಲ್ಲಿ ದಾಖಲಾಗಿದೆ, ಸದರಿ ಸ್ವತ್ತಿನ ಫಿರ್ಯಾದಿದಾರರ ಮಾಲೀಕತ್ವದ ಬಗ್ಗೆ ಯಾವುದೇ ವಿವಾದ ಇಲ್ಲದಿರುವ ಕಾರಣ, ಸದರಿ ತಪ್ಪಾದ ನಮೂದನ್ನು ಸರಿಪಡಿಸುವುದು ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಕರ್ತವ್ಯವಾಗಿದ್ದು, ಸದರಿ ದೋಷವನ್ನು ಸರಿಪಡಿಸಬೇಕಾಗಿದೆ.

6. ಆದ್ದರಿಂದ, ಸದರಿ ತಪ್ಪಾದ ನಮೂದನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 11.1.18

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.